# ಡಾ. ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ

9 ಮತ್ತು 10ನೇ ಮಹಡಿ, ವಿಶ್ವೇಶ್ವರಯ್ಯ ಚಿಕ್ಕ ಗೋಪುರ, ಡಾ. ಅಂಬೇಡ್ಕರ್ ವೀದಿ, ಬೆಂಗಳೂರು-560 001

===============================================================

ದಿನಾಂಕ 27.08.2013ರಂದು ಡಾ. ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮದ ಅಧ್ಯಕ್ಷರು ಹಾಗೂ ಮಾನ್ಯ ಸಚಿವರು, ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ಡಿ. ದೇವರಾಜ ಅರಸು ಭವನದಲ್ಲಿ ಬೆಳಿಗ್ಗೆ 11.00 ಗಂಟೆಗೆ ನಡೆದ 195ನೇ ನಿರ್ದೇಶಕ ಮಂಡಳಿಯ ಸಭಾ ನಡವಳಿಗಳು

**ಹಾಜರಾತಿ:**

1. ಶ್ರೀ ಹೆಚ್. ಆಂಜನೇಯ – ಅಧ್ಯಕ್ಷರು
   ಮಾನ್ಯ ಅಧ್ಯಕ್ಷರು
   ಡಾ. ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ

2. ಡಾ: ಇ. ವೆಂಕಟಯ್ಯ, ಭಾ.ಆ.ಸೇ., – ಸದಸ್ಯರು
   ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು
   ಸಮಾಜ ಕಲ್ಯಾಣ ಇಲಾಖೆ

3. ಶ್ರೀ ಎಸ್.ಎನ್. ಜಯರಾಂ, ಭಾ.ಆ.ಸೇ., – ಸದಸ್ಯರು
   ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ

4. ಶ್ರೀ ನಾಗರಾಜ ಚವ್ಹಾಣ್ – ಸದಸ್ಯರು
   ವ್ಯವಸ್ಥಾಪಕ ನಿರ್ದೇಶಕರು
   ಕರ್ನಾಟಕ ತಾಂಡ ಅಭಿವೃದ್ಧಿ ನಿಗಮ ನಿಯಮಿತ

5. ಶ್ರೀ ರಾಮಚಂದ್ರಯ್ಯ – ಸದಸ್ಯರು
   ಉಪ ಕಾರ್ಯದರ್ಶಿಗಳು (ಕಲ್ಯಾಣ)
   ಆರ್ಥಿಕ ಇಲಾಖೆ, ಕರ್ನಾಟಕ ಸರ್ಕಾರ

6. ಶ್ರೀಮತಿ ಎಲ್. ರಾಜೇಶ್ವರಿ – ಸದಸ್ಯರು
   ಉಪ ಕಾರ್ಯದರ್ಶಿಗಳು
   ಸಾರ್ವಜನಿಕ ಉದ್ದಿಮೆಗಳ ಇಲಾಖೆ, ಕರ್ನಾಟಕ ಸರ್ಕಾರ

7. ಡಾ. ಆರ್. ರಾಜು, ಭಾ.ಆ.ಸೇ., – ಸದಸ್ಯ ಕಾರ್ಯದರ್ಶಿಗಳು
   ವ್ಯವಸ್ಥಾಪಕ ನಿರ್ದೇಶಕರು
   ಡಾ. ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ

**ಗೈರು ಹಾಜರಿ:**

1. ಅಧ್ಯಕ್ಷರು ಹಾಗೂ ವ್ಯವಸ್ಥಾಪಕ ನಿರ್ದೇಶಕರು
   ರಾಷ್ಟ್ರೀಯ ಪರಿಶಿಷ್ಟ ಜಾತಿ ಹಣಕಾಸು ಮತ್ತು ಅಭಿವೃದ್ಧಿ ನಿಗಮ ನಿಯಮಿತ
   ಭಾರತ ಸರ್ಕಾರ, ನವದೆಹಲಿ

2. ನಿರ್ದೇಶಕರು
   ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಮಂತ್ರಾಲಯ
   ಭಾರತ ಸರ್ಕಾರ, ನವದೆಹಲಿ

Draft
30/08

ನಿಗಮದ ವ್ಯವಸ್ಥಾಪಕ ನಿರ್ದೇಶಕರು, ಮಾನ್ಯ ಅಧ್ಯಕ್ಷರು ಹಾಗೂ ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಹಾಗೂ ಇತರೆ ಹಾಜರಿದ್ದ ಸದಸ್ಯರುಗಳನ್ನು ಸಭೆಗೆ ಸ್ವಾಗತಿಸುತ್ತಾ ನಿಗಮದ ಅಧ್ಯಕ್ಷರನ್ನು ಸಭೆಯ ಅಧ್ಯಕ್ಷತೆಯನ್ನು ವಹಿಸಿ ಸಭೆಯನ್ನು ನಡೆಸಿ ಕೊಡಲು ಕೋರಿದರು. ಸಭೆ ನಡೆಸಲು ಇರಬೇಕಾದ ಕನಿಷ್ಠ ಸದಸ್ಯರ ಸಂಖ್ಯೆ (quorum) ಇದೇ ಎಂದು ಖಾತ್ರಿಪಡಿಸಿದರು.

**ವಿಷಯ ಸಂಖ್ಯೆ: 01:** ದಿನಾಂಕ 21.12.2012ರಂದು ಜರುಗಿದ ಡಾ. ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮದ 194ನೇ ಆಡಳಿತ ಮಂಡಳಿ ಸಭಾ ನಡವಳಿಯ ಅನುಪಾಲನ ವರದಿ.

ವ್ಯವಸ್ಥಾಪಕ ನಿರ್ದೇಶಕರವರು 194ನೇ ನಿರ್ದೇಶಕರ ಮಂಡಳಿ ಸಭೆಯ ನಡವಳಿ ಮೇಲೆ ಕೈಗೊಂಡ ಕ್ರಮಗಳ ಅನ್ವಯ ಅನುಪಾಲನ ವರದಿಯನ್ನು ಆಡಳಿತ ಮಂಡಳಿ ಸಭೆಯ ಗಮನಕ್ಕೆ ತಂದರು. ಸಭೆಯು ಸದರಿ ಅನುಪಾಲನಾ ವರದಿಯನ್ನು ಅವಲೋಕನ ಮಾಡುತ್ತಾ, ಸವಿಸ್ತಾರವಾಗಿ ಚರ್ಚಿಸಿ ಈ ಕೆಳಕಂಡಂತೆ ವಿಷಯವಾರು ಸಲಹೆಗಳನ್ನು ನೀಡಿದರು.

**ಕ್ರಮಸಂಖ್ಯೆ:5: ವಿಷಯ ಸಂಖ್ಯೆ: 7:**

194ನೇ ನಿರ್ದೇಶಕರ ಮಂಡಳಿ ಸಭೆಯಲ್ಲಿ ತೆಗೆದುಕೊಂಡ ತೀರ್ಮಾನದ ಅನುಪಾಲನೆಯನ್ನು ಒಪ್ಪುತ್ತಾ, **"ಏತನೀರಾವರಿ"** ಯೋಜನೆಯಲ್ಲಿ ಇಲ್ಲಿಯವರೆವಿಗೂ ಅನುಷ್ಠಾನಗೊಳಿಸಿರುವ ಒಟ್ಟಾರೆ ಫಲಾನುಭವಿಗಳು ಮತ್ತು ಅಭಿವೃದ್ಧಿಗೊಳಿಸಿದ ನೀರಾವರಿ ಭೂಮಿಯನ್ನು ಮತ್ತು ಅದರಿಂದಾದ ಆರ್ಥಿಕ ಅಭಿವೃದ್ಧಿ ಹಾಗೂ ಇನ್ನಿತರೆ ಸ್ಥಿತಿಗತಿಗಳನ್ನೊಳಗೊಂಡಂತೆ ಒಂದು ಸಮೀಕ್ಷೆಯನ್ನು ಯೋಗ್ಯವಾದ ಸಂಸ್ಥೆಯಿಂದ ನಡೆಸಲು ತಿಳಿಸಿದರು. ಅಲ್ಲದೇ, ಸನ್ಮಾನ್ಯ ಅಧ್ಯಕ್ಷರು ಈ ಪ್ರಕ್ರಿಯೆಯಲ್ಲಿ ಸವಲತ್ತನ್ನು ಪಡೆದಿರುವ ಫಲಾನುಭವಿಗಳ ಜಾತಿ ಮತ್ತು ಉಪಜಾತಿವಾರು ಮಾಹಿತಿಯನ್ನು ತಯಾರಿಸಲು ತಿಳಿಸಿದರು.

**ಕ್ರಮಸಂಖ್ಯೆ:6: ವಿಷಯ ಸಂಖ್ಯೆ: 8:**

ಚಾಮರಾಜನಗರ, ಮೈಸೂರು ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ ಜೀತಮುಕ್ತಿಗೊಂಡ 105 ನಿರಾಶ್ರಿತರಿಗೆ **"ಗಂಗಾಕಲ್ಯಾಣ"** ಯೋಜನೆಯಡಿ ಕೊಳವೆಬಾವಿ ಸೌಲಭ್ಯ ಒದಗಿಸುವಲ್ಲಿ ಅನುಸರಿಸಲಾಗಿರುವ ಮಂದಗತಿಯ ಕ್ರಮದಿಂದ ಪ್ರಗತಿಯು ಕುಂಠಿತವಾಗಿರುವ ಬಗ್ಗೆ ತೀವ್ರವಾದ ಆಕ್ಷೇಪಣೆಯನ್ನು ಸಭೆಯು ವ್ಯಕ್ತಪಡಿಸಿತು. ಈ ದಿಶೆಯಲ್ಲಿ ಆದ್ಯತೆಯ ಮೇಲೆ ಕ್ರಮ ಕೈಗೊಂಡು ಫಲಾಪೇಕ್ಷಿಗಳಿಂದ ಪಡೆಯಬೇಕಾಗಿರುವ ದಾಖಲೆಗಳನ್ನು ಕೂಡಲೇ ಪಡೆದು ಸವಲತ್ತನ್ನು (ಭೂಮಿ, ಕೊಳವೆಬಾವಿ ಮತ್ತು ಇತರೆ) ಒಂದು ತಿಂಗಳಲ್ಲಿ ವಿತರಿಸಲು ತಿಳಿಸಿದರು. ಒಂದು ವೇಳೆ ಈ ಪ್ರಗತಿ ಸಾಧಿಸುವಲ್ಲಿ ವಿಫಲರಾಗುವ ಅಧಿಕಾರಿಗಳ ಮೇಲೆ ಕ್ರಮಕೈಗೊಳ್ಳುವಂತೆ ಸಭೆಯು ತಿಳುವಳಿಕೆ ನೀಡಿತು.

**ಕ್ರಮಸಂಖ್ಯೆ:9: ವಿಷಯ ಸಂಖ್ಯೆ: 11:**

ರಾಜ್ಯಾದ್ಯಂತ, ಡಾ. ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮದ ವತಿಯಿಂದ ಅನುಷ್ಠಾನಗೊಳಿಸಲು ಅನುವಾಗುವಂತೆ ಸರ್ಕಾರವು ಹೊರಡಿಸಿರುವ ಸರ್ಕಾರಿ ಆದೇಶ ಸಂಖ್ಯೆ: ಸಕಇ ಎಸ್‌ಡಿಸಿ 2011 ದಿನಾಂಕ 9.8.2011 ರಂತೆ ಪರಿಷ್ಕರಿಸಲಾಗಿರುವ ದರ ಪ್ರತಿ ಘಟಕಕ್ಕೆ ರೂ.58,500/- ಗಳನ್ನು ಅಳವಡಿಸಿಕೊಂಡು ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸುತ್ತಿರುವ ಹೈನುಗಾರಿಕೆಯ ವಿಶೇಷ ಯೋಜನೆಯನ್ನು ಪೂರ್ಣಗೊಳಿಸಲು ಸಭೆಯು ತಿಳಿಸಿತು.

**ಕ್ರಮಸಂಖ್ಯೆ:14: ವಿಷಯ ಸಂಖ್ಯೆ: 16:**

ನಿಗಮದ ಮಾಲಿಕತ್ವದಲ್ಲಿ ರಾಜ್ಯಾದ್ಯಂತ ಜಿಲ್ಲಾ ಕೇಂದ್ರಗಳಲ್ಲಿ ಕಛೇರಿ ಕಟ್ಟಡ ನಿರ್ಮಾಣಕ್ಕಾಗಿ ಇರುವ ಸ್ಥಳಗಳಲ್ಲಿ ನಿಗಮದ ಜಿಲ್ಲಾ ವ್ಯವಸ್ಥಾಪಕರ ಕಛೇರಿಗಳನ್ನು ವ್ಯವಸ್ಥಾಪನೆಗೊಳಿಸಲು ಅನ್ವಯವಾಗುವಂತೆ ಕಟ್ಟಡದ ವಿನ್ಯಾಸವನ್ನು ಕರ್ನಾಟಕ ಭೂ ಸೇನಾ ನಿಗಮದವರ ಮೂಲಕ ತಯಾರಿಸಿ ಸಮಾಜ ಕಲ್ಯಾಣ ಇಲಾಖೆ ಮತ್ತು ಇದರ ಸ್ವಾಮ್ಯಕ್ಕೊಳಪಟ್ಟ ನಿಗಮ ಮಂಡಳಿಗಳಿಗೂ ಉಪಯೋಗವಾಗುವಂತೆ ಸಂಯುಕ್ತ ಕಛೇರಿ ಕಟ್ಟಡವನ್ನು ನಿರ್ಮಾಣ ಮಾಡಲು ಅನುವಾಗುವಂತೆ ಕ್ರಮಕೈಗೊಳ್ಳಲು ಸಭೆಯು ತಿಳಿಸಿತು.

**ಕ್ರಮಸಂಖ್ಯೆ:16: ವಿಷಯ ಸಂಖ್ಯೆ: 18:**

ಡಾ. ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮದ ವತಿಯಿಂದ, ಎನ್.ಎಸ್.ಎಫ್.ಡಿ.ಸಿ ರವರ ಆರ್ಥಿಕ ಸಹಯೋಗದೊಂದಿಗೆ ಅನುಷ್ಠಾನಗೊಳಿಸಲಾಗುತ್ತಿದ್ದ "ಉನ್ನತ ಶಿಕ್ಷಣ" ಸಾಲದ ಯೋಜನೆಯನ್ನು ಒಟ್ಟಾರೆಯಾಗಿ ರದ್ದುಪಡಿಸಲು ತೀರ್ಮಾನಿಸಿತು. ಅಂತೆಯೇ, ಈ ದಿನದಂತೆ ನಿಗಮದ ವ್ಯಾಪಿಯಲ್ಲಿ ಉನ್ನತ ಶಿಕ್ಷಣ ವ್ಯಾಸಂಗದ ಸಾಲಕ್ಕಾಗಿ ಸಲ್ಲಿಸಿದ್ದು ಇತ್ಯಾರ್ಥವಾಗದೆ ಬಾಕಿಯಿರುವ ಎಲ್ಲಾ ಅರ್ಜಿಗಳನ್ನು ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ ರವರಿಗೆ ವರ್ಗಾಯಿಸಿ ಅಲ್ಲಿ ನೀಡಲಾಗುತ್ತಿರುವ ಉನ್ನತ ಶಿಕ್ಷಣ ಅನುದಾನವನ್ನು ಪಡೆಯಲು ತಿಳಿಸಿತು.

**ಕ್ರಮಸಂಖ್ಯೆ:20: ಹೆಚ್ಚುವರಿ ವಿಷಯ ಸಂಖ್ಯೆ: 4:**

ಸಭೆಯು ಅನುಪಾಲನಾ ವರದಿಯಂತೆ ಈ ವಿಷಯವು ಮುಕ್ತಾಯವಾಗಿರುವುದನ್ನು ಗಮನಿಸಿ, ನಿಗಮಕ್ಕೆ ಸೀಮಿತವಾಗಿ ವಸತಿ ಸಂಕೀರ್ಣ ನಿರ್ಮಿಸಲು ಅನುವಾಗುವಂತಹ ಯೋಗ್ಯ ಸ್ಥಳವನ್ನು ಬಿ.ಡಿ.ಎ ಮೂಲಕ ಪಡೆಯಲು ಪ್ರಯತ್ನ ಮಾಡಲು ತಿಳಿಸಿತು.

ವಿಷಯ ಸಂಖ್ಯೆ:02: 2012-13ನೇ ಸಾಲಿನ ವಾರ್ಷಿಕ ಲೆಕ್ಕಪತ್ರವನ್ನು ಅನುಮೋದಿಸುವ ಕುರಿತು.

ಸಭೆಯು 2012-13ನೇ ಸಾಲಿನ ಲಾಭ ಮತ್ತು ನಷ್ಟ ತ:ಖ್ತೆ ಮತ್ತು ಬ್ಯಾಲೆನ್ಸ್ ಶೀಟ್‌ನ್ನು ಅವಲೋಕನ ಮಾಡುತ್ತಾ, ಈ ಕೆಳಕಂಡಂತೆ ತೀರ್ಮಾನಿಸಲಾಯಿತು:

1. "**RESOLVED THAT** the draft Balance Sheet as at 31st March 2013, Profit & Loss account and Cash Flow Statement for the year ended 31st March 2013 be and is hereby approved and that the Managing Director and any one of the Directors of the Corporation along with General Manager Finance be and are authorized to sign the Balance Sheet and Profit & Loss Account for the year ending 31st March 2013 on behalf of the Board and that the signed Balance Sheet and Profit & Loss Account be presented to the Auditors for the report thereon.

2. "**RESOLVED THAT** 38th Annual General Meeting of the Corporation be held on 28th September 2013 and that the Managing Director be and is hereby authorized to issue the notice convening the 38th Annual General Meeting of the company at the Registered Office on 28th September 2013.

**Application for extension of time to hold the Annual General Meeting beyond the due date:**

3. "**RESOLVED** that approval be and is hereby accorded to seek extension of time to hold the 38th Annual General Meeting after the due date of 30th September 2013 but before 31st December 2013 and that the Managing Director is hereby authorized to make necessary application under Section 166 of the Companies Act, 1956 to the Ministry of Corporate Affairs, Government of India."

ವಿಷಯ ಸಂಖ್ಯೆ:03: ಮಾನ್ಯ ಸಮಾಜ ಕಲ್ಯಾಣ ಸಚಿವರನ್ನು ನಿಗಮದ ಅಧ್ಯಕ್ಷರನ್ನಾಗಿ ನೇಮಿಸಿರುವ ಬಗ್ಗೆ.

ಸರ್ಕಾರದ ಅಧಿಸೂಚನೆ ಸಂಖ್ಯೆ ಸಕಇ 261 ಪಕಸೇ 2013 ದಿನಾಂಕ 22.07.2013ರಲ್ಲಿ ಸರ್ಕಾರವು ಶ್ರೀ ಹೆಚ್. ಆಂಜನೇಯ, ಸನ್ಮಾನ್ಯ ಸಚಿವರು, ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಇವರನ್ನು ಡಾ. ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮದ ಅಧ್ಯಕ್ಷರನ್ನಾಗಿ ನೇಮಿಸಿರುವುದನ್ನು ಗಮನಿಸಿತು. ಈ ಹಿಂದೆ ನಿಗಮದ ಅಧ್ಯಕ್ಷರಾಗಿದ್ದ ಶ್ರೀ ಎ.ಆರ್. ಕೃಷ್ಣಮೂರ್ತಿರವರು ಸಲ್ಲಿಸಿದ ಸೇವೆಗೆ ಕೃತಜ್ಞತೆ ಸಲ್ಲಿಸಿತು.

ವಿಷಯ ಸಂಖ್ಯೆ:04: ನಿಗಮದ ವ್ಯವಸ್ಥಾಪಕ ನಿರ್ದೇಶಕರು ಬದಲಾವಣೆಯಾಗಿರುವ ಬಗ್ಗೆ.

ಸರ್ಕಾರದ ಅಧಿಸೂಚನೆ ಸಂಖ್ಯೆ ಸಕಇ 38 ಎಸ್‌ಡಿಸಿ 2013 ದಿನಾಂಕ 22.02.2013ರನ್ವಯ ಡಾ. ಆರ್. ರಾಜು, ಭಾ.ಅ.ಸೇ., ರವರನ್ನು ಡಾ: ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕರನ್ನಾಗಿ ನೇಮಿಸಿರುವುದನ್ನು ಗಮನಿಸಿತು. ಈ ಹಿಂದೆ ನಿಗಮದ ವ್ಯವಸ್ಥಾಪಕ ನಿರ್ದೇಶಕರಾಗಿದ್ದ ಶ್ರೀ ಕೆ.ಎಸ್. ಮೃತ್ಯುಂಜಯ ರವರು ಸಲ್ಲಿಸಿದ ಸೇವೆಗೆ ಕೃತಜ್ಞತೆ ಸಲ್ಲಿಸಿತು.

ವಿಷಯ ಸಂಖ್ಯೆ: 05: ಶ್ರೀ ನವೀನ್‌ರಾಜ್ ಸಿಂಹ, ಭಾ.ಆ.ಸೇ., ಇವರ ಬದಲಾಗಿ ಶ್ರೀ ಎಸ್.ಎನ್. ಜಯರಾಂ, ಭಾ.ಆ.ಸೇ., ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ ಇವರನ್ನು ನಿಗಮದ ನಿರ್ದೇಶಕರ ಮಂಡಳಿಯ ನಿರ್ದೇಶಕರನ್ನಾಗಿ ನೇಮಿಸಿರುವ ಕುರಿತು.

ಸರ್ಕಾರದ ಅಧಿಸೂಚನೆ ಸಂಖ್ಯೆ:ಡಿಪಿಎಆರ್ 631 ಎಸ್‌ಎಎಸ್ 2013 ದಿನಾಂಕ 10.08.2013ರನ್ವಯ ಶ್ರೀ ನವೀನ್ ರಾಜ್ ಸಿಂಹ, ಭಾ.ಆ.ಸೇ., ಇವರ ಸ್ಥಾನಕ್ಕೆ ಶ್ರೀ ಎಸ್.ಎನ್. ಜಯರಾಂ, ಭಾ.ಆ.ಸೇ., ರವರನ್ನು ಸಮಾಜ ಕಲ್ಯಾಣ ಇಲಾಖೆಯ ಆಯುಕ್ತರನ್ನಾಗಿ ನೇಮಿಸಿರುವುದನ್ನು ಗಮನಿಸಿತು. ಶ್ರೀ ನವೀನ್‌ರಾಜ್ ಸಿಂಹ, ಭಾ.ಆ.ಸೇ., ರವರು ನಿಗಮದ ನಿರ್ದೇಶಕರ ಮಂಡಳಿಯ ಸದಸ್ಯರಾಗಿ ಸಲ್ಲಿಸಿದ ಸೇವೆಗೆ ಕೃತಜ್ಞತೆಗಳನ್ನು ಸಲ್ಲಿಸಿತು.

ವಿಷಯ ಸಂಖ್ಯೆ:06: ನಿಗಮದ ಸಾಲಮನ್ನಾ ಮಾಡಿರುವ ಬಗ್ಗೆ ನಿರ್ದೇಶಕರ ಮಂಡಳಿ ವತಿಯಿಂದ ಸರ್ಕಾರಕ್ಕೆ ಕೃತಜ್ಞತೆಗಳನ್ನು ಸಲ್ಲಿಸುವ ಕುರಿತು.

ಘನ ಸರ್ಕಾರವು ಆರ್ಥಿಕವಾಗಿ ಹಿಂದುಳಿದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ 3,10,932 ಫಲಾನುಭವಿಗಳು ನಿಗಮಕ್ಕೆ ಪಾವತಿಸಬೇಕಾಗಿದ್ದ ಬಾಕಿ ಸಾಲ ಮೊತ್ತ ರೂ.511.83 ಕೋಟಿಗಳನ್ನು ಮನ್ನಾ ಮಾಡಿರುವುದರಿಂದ ಸದರಿ ಫಲಾನುಭವಿಗಳು ಸಾಲದ ಹೊರೆಯಿಂದ ಮುಕ್ತರಾಗಿರುತ್ತಾರೆ. ಈ ಸಾಲ ಮನ್ನಾದಿಂದ ನಿಗಮವು ಸಹ ಸದೃಡವಾಗಿ ಮುನ್ನಡೆಯುವುದಲ್ಲದೆ ಇನ್ನೂ ಹೆಚ್ಚಿನ ಸಂಖ್ಯೆಯ ಫಲಾಪೇಕ್ಷಿಗಳಿಗೆ ಸೌಲಭ್ಯ ಕಲ್ಪಿಸಲು ಅನುಕೂಲವಾಗಿದೆ. ಈ ಹಿನ್ನೆಲೆಯಲ್ಲಿ ನಿರ್ದೇಶಕರ ಮಂಡಳಿಯು ಸರ್ಕಾರದ ಕಾರ್ಯವನ್ನು ಶ್ಲಾಘಿಸಿ ಕೃತಜ್ಞತೆಯನ್ನು ಸಲ್ಲಿಸಿತು.

ವಿಷಯ ಸಂಖ್ಯೆ:07: 2012-13ನೇ ಸಾಲಿನಲ್ಲಿ ಮಂಜೂರಾದ ವಾರ್ಷಿಕ ಕ್ರಿಯಾ ಯೋಜನೆ ತ:ಖ್ತೆಯಲ್ಲಿರುವಂತೆ ವಿವಿಧ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಿದ ಪ್ರಗತಿಯನ್ನು ನಿರ್ದೇಶಕರ ಮಂಡಳಿ ಗಮನಕ್ಕೆ ತರುವ ಬಗ್ಗೆ.

ನಿರ್ದೇಶಕರ ಮಂಡಳಿಯು 2012-13ನೇ ಸಾಲಿನಲ್ಲಿ ಮಂಜೂರಾದ ವಾರ್ಷಿಕ ಕ್ರಿಯಾ ಯೋಜನೆ ಹಾಗೂ ಅನುಷ್ಠಾನಗೊಳಿಸಿದ ಪ್ರಗತಿಯನ್ನು ಅವಲೋಕನ ಮಾಡಿತು. 2012-13ನೇ ಸಾಲಿನಲ್ಲಿ ಮಂಜೂರಾಗಿ ಅನುಷ್ಠಾನಗೊಳಿಸಲಾಗದೆ ಬಾಕಿಯಾಗಿರುವ ಕೆಲಸಗಳನ್ನು 2013-14ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆಯಲ್ಲಿ ಮುಂದುವರಿದ ಕೆಲಸಗಳನ್ನಾಗಿ ಪರಿಗಣಿಸಿ ಕೂಡಲೇ ಅನುಷ್ಠಾನಗೊಳಿಸಲು ಕ್ರಮವಹಿಸುವಂತೆ ತೀರ್ಮಾನಿಸಿತು.

20/08